ಅದೃಷ್ಟ' ಎಂಬ ಮಾತು ಬಾಯಲ್ಲಿ ಮತ್ತೆ ಮತ್ತೆ ಬಂತು. ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಕೂತಳು. ಕಣ್ಣ ಮುಂದೆ ಕವಿದಿದ್ದ ಕತ್ತಲು ನಿಧಾನಕ್ಕೆ ಕಳೆದು ಬೆಳಕಾಯಿತು. ಮೆಲ್ಲಗೆ ಎದ್ದು ಹೋಟೆಲಿನ ದಾರಿ ಹಿಡಿದು ಹೊಟ್ಟೆಗೆ ಸಮಾಧಾನ ಮಾಡಿ ಹೊರ ಬಂದು ನಿಂತು ಸುತ್ತಲೂ ನೋಡಿದವಳಿಗೆ ಎಲ್ಲವೂ ಹಿಂದಿನಂತೆಯೇ ಇದೆ ಎಂದೆನ್ನಿಸಿತು.

ವಾಹನಗಳ ಓಡಾಟ ಹೆಚ್ಚಾಗಿತ್ತು. ಮೆಲ್ಲಗೆ ತನ್ನ ಫುಟ್‌ಪಾತಿನತ್ತ ಹೆಜ್ಜೆ ಹಾಕುತ್ತಿದ್ದವಳಿಗೆ ಮುಂದಿನ ತಿರುವಿನಲ್ಲಿ ಐನೂರು ಕೊಡುತ್ತಿದ್ದ ಕಾರು ಹೊರಳಿ ಹೋದದ್ದು ಕಂಡಿತು. “ಅಯ್ಯಾ.. ಇವತ್ತ್ ಮತ್ತೆ ಕೊಡ್ತಿದ್ನೋ ಏನೋ? ಐನೂರು ಹೋಯ್ತ್” ಎಂದು ಪೇಚಾಡಿ ಬಡ ಬಡ ತನ್ನ ಜಾಗಕ್ಕೆ ಬಂದು ನಿಲ್ಲುವುದಕ್ಕೂ ಸಿಗ್ನಲ್ ಬೀಳುವುದಕ್ಕೂ ಸರಿ ಹೋಯಿತು, ತಡಮಾಡದೆ ಎಂದಿನಂತೆ ವೈಯ್ಯಾರದಿಂದ ಚಪ್ಪಾಳೆ ತಟ್ಟಿ ಕೆಲಸಕ್ಕಿಳಿದಳು.

ಸಿಗ್ನಲ್ಲು ಬಿಡುವಷ್ಟರಲ್ಲಿ ಮೂವತ್ತು ರೂಪಾಯಿ ಕಲೆಕ್ಷನ್ ಆಗಿತ್ತು. ನಂತರ ಫುಟ್‌ಪಾತಿನ ಮೇಲೆ ಬಂದು ನಿಂತವಳು ಸುಕನ್ಯಾಳ ರೋಡಿನ ಕಡೆ ನೋಡಿದಳು, ಅವಳು ಕಾಣಲಿಲ್ಲ. ಅಲ್ಲೇ ಎಲ್ಲೋ ಇರಬಹುದು ಎಂದುಕೊಳ್ಳುವಷ್ಟರಲ್ಲಿ ಸಣ್ಣದೊಂದು ಗಂಟೆಯನ್ನು ಹೊಡೆದುಕೊಂಡು ಬಂದ ಬಂಡಿಯನ್ನು ನಿಲ್ಲಿಸಿ ಚಾಕಲೇಟು ಫ್ಲೇವರ್ ಐಸ್ಕ್ರೀಮ್ ತಿಂದು ತಣ್ಣಗಾದಳು.

ಮತ್ತೆ ಸಿಗ್ನಲ್ಲುಗಳು ಬಿದ್ದವು, ಸಿಗ್ನಲ್ಲುಗಳು ಬಿಟ್ಟವು, ಊಟದ ಹೊತ್ತಾಯಿತು ಸುಕನ್ಯಾ ಬರಲಿಲ್ಲ. ರಾಧಾಳೇ ಅವಳ ರೋಡಿಗೆ ಹೋಗಿ ಬಹಳ ಹೊತ್ತು ಕಾದಳು, ಪ್ರಯೋಜನವಾಗಲಿಲ್ಲ. ಸುತ್ತಮುತ್ತಲಿನ ಗುರುತಿನ ಅಂಗಡಿಗಳಲ್ಲಿ ವಿಚಾರಿಸಿದಳು. ತನ್ನ ಮೊಬೈಲ್ ತೆಗೆದು ಫೋನು ಮಾಡಿದಳು. ಅವಳ ನಂಬರ್, ಸ್ವಿಚ್ ಆಫ್ ಬರುತ್ತಿತ್ತು. ಎಲ್ಲರೂ 'ಒಂದು ತಾಸಿನ ಹಿಂದೆ ಇಲ್ಲೇ ಇದ್ದಳು ಆಮೇಲೆ ನೋಡಿಲ್ಲವೆಂದು' ಹೇಳಿದರು. ರಾಧಾ ತಾಸಿನ ಹಿಂದೆ ತಾನು ಮರದ ನೆರಳಲ್ಲಿ ಕೂತಿದ್ದೆ ಎಂಬುದನ್ನು ನೆನಪಿಸಿಕೊಂಡಳು. ತಿರುವಿನಲ್ಲಿ ಕಂಡಿದ್ದ ಐನೂರು ರುಪಾಯಿ ಕಾರಿನ ನೆನಪಾಗಿ ಇದ್ದ ಭಯ ನೂರುಪಟ್ಟಾಗಿ ಕೈ ಕಾಲು ಆಡಲಿಲ್ಲ. 'ಸಿಕ್ಕಾಗಲೆಲ್ಲಾ ದುಡ್ಡು ಕೊಟ್ಟು ಕೈ ಮುಗಿಯುತ್ತಿದ್ದವನ ಮುಖದಲ್ಲಿ ಏನೋ ಮಸಲತ್ತಿತ್ತು' ಎಂಬ ಅನುಮಾನವಾಗಿ ಬಲವಾಗಲತ್ತಿತು. ಇದೇ ಲಹರಿಯಲ್ಲಿ ಸುಕನ್ಯಾಳ ಕೊಲೆ ಆಗಿರಬಹುದಾದ ಸಾಧ್ಯತೆಯವರೆಗೆ ಯೋಚನೆ ಹೋಗಿ ಬಂತು.

ಅವಸರವಸರದಲ್ಲಿ ಏದುಸಿರು ಬಿಡುತ್ತಾ ಕಾಯಿನ್ ಬೂತಿಗೆ ಓಡಿ ಬಂದ ರಾಧಾ, ಸುಕನ್ಯಾಳ ನಂಬರ್ ಡಯಲ್ ಮಾಡಿದಾಗ ಆ ಕಡೆಯಿಂದ ಸ್ವಿಚ್ ಆಫ್ ಬಂತು. ಮತ್ತೆ ಡಯಲ್ ಮಾಡಿದಳು. ಮತ್ತದೇ ಉತ್ತರ. ದೂರದಲ್ಲಿ ತನ್ನ ಅಂಗಡಿಯ ಹೊರಗೆ ಫೋನಿನಲ್ಲಿ ಮಾತಾಡುತ್ತಿದ್ದ ಮೊಬೈಲು ಅಂಗಡಿಯವನು ಇವಳನ್ನು ಕಂಡು ಕರೆದ. ಇವಳು ಹೋಗಿ ನಿಲ್ಲುವಷ್ಟರಲ್ಲಿ ಒಳ ಹೋದವನು ಬಂದು ಒಂದು ಮೊಬೈಲು ತಂದು, “ನಿನ್ ಜೊತೀಗೆ ಸಿಗ್ನಲ್ಲಿನ್ಯಾಗ ಇರ್ತಾಳಲ್ಲ ಆಕೀಗೆ ಕೊಡು. ರಿಪೇರಿ ಮಾಡಿ, ಸಾಯಂಕಾಲ ಕೊಡ್ತೀನಿ ಅಂದಿದ್ದೆ. ಅರ್ಜೆಂಟ್ ಕೆಲ್ಸ್‌ಐತೆ ಈಗ ಮನೀ ಕಡೀಗೆ ಹೋಗ್ಬೇಕು, ಒಂದೆರ್ಡು ದಿನ ಅಂಗ್ಡಿ ಮುಚ್ಚಾಕತ್ತೀನಿ” ಎಂದು ಆಗಲೇ ಹೊಂದಿಸಿದ್ದ ಸಾಮಾನುಗಳ ಕಪಾಟುಗಳಿಗೆ ಬೀಗಗಳನ್ನು ಹಾಕಿ ಭದ್ರಪಡಿಸುವುದರಲ್ಲಿ ತೊಡಗಿದ. 'ಯಾವಾಗ ಕೊಟ್ಹೋಗಿದ್ಲು?' ಎಂಬ ರಾಧಾಳ ಪ್ರಶ್ನೆಗೆ ಅಂಗಡಿಯವ ಎಲ್ಲೋ ನೋಡುತ್ತಾ, 'ಒಂದೆರ್ಡ್ ತಾಸ್ ಆಯ್ತು' ಎಂದ. ಮೊಬೈಲೂ ಇಲ್ಲೇ ಬಿಟ್ಟು ಹೋದ ಸುಕನ್ಯಾಳನ್ನು ಬೈದುಕೊಂಡಳು ಹೆಜ್ಜೆ ಹಾಕಿದಳು ರಾಧಾ.

ಎದುರಾದ ಪ್ರತಿ ವ್ಯಕ್ತಿಯಲ್ಲೂ ರಾಧಾ ಸುಕನ್ಯಾಳನ್ನು ಹುಡುಕಾಡ ಹತ್ತಿದಳು. ಕಣ್ಣುಗಳು